ನಗರ ಪಾಲಿಕೆಗೆ ಸೇರಿದ ಜಾಗಗಳ ಗುತ್ತಿಗೆ

137 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ಮಹಾನಗರಪಾಲಿಕೆಗೆ ಸೇರಿದ ಜಾಗಗಳನ್ನು ಗುತ್ತಿಗೆ ಆಧಾರದ ಮೇಲೆ ಕ್ಲಬ್‌ಗಳಿಗೆ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಯಾವ ಯಾವ ಕ್ಲಬ್‌ಗಳಿಗೆ ಎಷ್ಟೆಷ್ಟು ಜಾಗವನ್ನು ಎಷ್ಟು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ ?

ಇ) ಈ ಕ್ಲಬ್‌ಗಳು ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿ ಈ ಜಾಗದಲ್ಲಿ ಷರತ್ತುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಬೆಂಗಳೂರು ನಗರದಲ್ಲಿ ಈ ರೀತಿ ಗುತ್ತಿಗೆಗೆ ನೀಡಿರುವ ಜಾಗಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವಶಪಡಿಸಿಕೊಂಡು ಗುತ್ತಿಗೆಯನ್ನು ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) ವಿವರ ಪಟ್ಟಿಯನ್ನು ಲಗತ್ತಿಸಿದೆ.

ಇ) ಹೌದು

ಈ) ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ನಿಯಮಾವಳಿ ರೀತಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಜಾಗಗಳನ್ನು ಗುತ್ತಿಗೆ ಆಧಾರದ ಮೇಲೆ ಕ್ಲಬ್‌ಗಳಿಗೆ ನೀಡಿರುವ ವಿವರಗಳ ಪಟ್ಟಿ

ಕ್ರ. ಸಂಖ್ಯೆ	ಕ್ಲಬ್ ಹೆಸರು	ವಿಸ್ತೀರ್ಣ	ಗುತ್ತಿಗೆ ಅವಧಿ ವಿವರ
1.	ರೋಟರಿ ಕ್ಲಬ್, ಬೆಂಗಳೂರು ದಕ್ಷಿಣ ರೋಟರಿ ಟ್ರಸ್ಟ್, ಕೆ.ಆರ್.ರಸ್ತೆ, ಬಸವನಗುಡಿ	$\frac{108+100}{2} \times 72$	35 ವರ್ಷಗಳಿಗೆ ದಿನಾಂಕ: 12-8-76 ರಿಂದ
2.	ಅಧ್ಯಕ್ಷರು, ವಿಲ್ಸನ್ ಗಾರ್ಡನ್ ರೀಡಿಂಗ್ ರೂಂ ಮತ್ತು ಕ್ಲಬ್ ಬೆಂಗಳೂರು	$\frac{116+148}{2} \times \frac{120+124}{2}$	20 ವರ್ಷಗಳು ದಿನಾಂಕ: 9-11-76 ರಿಂದ
3.	ಲಯನ್ಸ್ ಕ್ಲಬ್, ಬೆಂಗಳೂರು ರೀಡಿಂಗ್ ರೂಂ ಮತ್ತು ಕ್ಲಬ್ ಮುಖ್ಯ ರಸ್ತೆ, ಚಾಮರಾಜಪೇಟೆ ಹೆಚ್. ಸಿದ್ದಯ್ಯ ರಸ್ತೆ	$\frac{113+103}{2} \times \frac{54+53}{2}$	35 ವರ್ಷಗಳು ದಿನಾಂಕ: 17-1-76 ರಿಂದ
4.	ಅಧ್ಯಕ್ಷರು, ರೋಟರಿ ಕ್ಲಬ್ ಜೆ.ಪಿ. ನಗರ, 1ನೇ ಹಂತ, ಬೆಂಗಳೂರು	16 x 10	1 ವರ್ಷ ದಿನಾಂಕ: 4-7-91 ರಿಂದ

5.	ಡಿ. ಸೆಕ್ರೆಟರಿ, ಕಾಸ್ಮ ಪೊಲಿಟನ್ ರಿಕ್ರಿಯೇಷನ್ ಕ್ಲಬ್, 3ನೇ ಬ್ಲಾಕ್, ಜಯನಗರ	947 ಚದರ ಗಜ	5 ವರ್ಷಗಳು ದಿನಾಂಕ: 29-1-89 ರಿಂದ
6.	ಕಾರ್ಯದರ್ಶಿ, ಇಂದಿರಾನಗರ ಕ್ಲಬ್, ಹೆಚ್.ಎ.ಎಲ್. 2ನೇ ಹಂತ	330 x 300	50 ವರ್ಷಗಳು ದಿನಾಂಕ: 6-3-81 ರಿಂದ
7.	ಇಂಡಿಯನ್ ಜಂಖಾನ ಮಿಲ್ಲರ್ ರಸ್ತೆ, ಕಾಕ್ಸ್‌ಟೌನ್	$\frac{560+500}{2} \times \frac{400+370}{2}$	35 ವರ್ಷಗಳು ದಿನಾಂಕ: 18-6-73 ರಿಂದ
8.	ವಿಮೆನ್ಸ್ ಇಂಡಿಯನ್ ಅಸೋಷಿಯೇಷನ್ ಎಂ.ಎಂ. ರಸ್ತೆ, ಭಾರತಿನಗರ	150 x 150	1947 ರಿಂದ ಕಾಲಮಿತಿ ಇಲ್ಲ

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಗರದಲ್ಲಿ ಇರತಕ್ಕಂತಹ ದೊಡ್ಡ ದೊಡ್ಡ ಆಟದ ಮೈದಾನಗಳು ಇತರೆ ದೊಡ್ಡ ದೊಡ್ಡ ಜಾಗಗಳಲ್ಲಿ ಹಲವಾರು ವರ್ಷಗಳ ಅವಧಿಗೆ ಲೀಸ್‌ಗೆ ಕೊಟ್ಟು, ಸಾರ್ವಜನಿಕರ ಅನುಕೂಲಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡದೆ, ಅವರು ತೆಗೆದುಕೊಂಡ ಉದ್ದೇಶಕ್ಕೆ ಉಪಯೋಗಿಸದೆ, ಬೇರೆ ಬೇರೆ ಉದ್ದೇಶಗಳಿಗಾಗಿ ಉಪಯೋಗಿಸಿದ್ದಾರೆ. ಅಂತಹ ಲೀಸ್‌ಗಳನ್ನು ವಾಪಸ್ ಪಡೆದು ಸಾರ್ವಜನಿಕರಿಗೆ ಅನುಕೂಲ ಆಗುವಂತಹ ಕಾರ್ಯಗಳನ್ನು ಮಾಡಬೇಕೆಂದು ದಯಮಾಡಿ ಮನವಿ ಮಾಡುತ್ತೇನೆ.

ಶ್ರೀ ಎನ್. ರಾಜಣ್ಣ : ಪ್ಲೇಗ್ರೌಂಡ್ಸ್ ಮಾಯ ಮಾಡುವುದಕ್ಕೆ ಜನ ಹುಟ್ಟಿಕೊಂಡಿದ್ದಾರೆ. ಇಲ್ಲಿ ಜನತೆಯ ಸ್ಥಿತಿ ಚಿಂತಾಜನಕವಾಗಿದೆ. ಅಲ್ಲಿ ವಾಸವಿದ್ದ ಬಡ ಜನರನ್ನು ಆಟದ ಮೈದಾನದಿಂದ ಹೊರಗಡೆ ಓಡಿಸಿದ್ದರಿಂದ ಪಾಪ ಬೀದಿ ಪಾಲಾಗಿದ್ದಾರೆ. ಕೆಲವು ಫೀಲ್ಡ್‌ಗಳಿಂದ ಅದರಲ್ಲೂ The question (d) is,

"Whether there is any proposal before the Government to acquire these lands in public interest and cancel the lease?"

and the answer given by the Government is

"Action is being taken as per rules where lease conditions are violated"

ಐದು ಎಕರೆ ಜಾಗ ಲೀಸ್‌ಗೆ ಕೊಟ್ಟು, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದಂತಹ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಒಳ್ಳೆಯ ಕೆಲಸ ಮಾಡಿದ್ದರು. ನವೆಂಬರ್‌ನಲ್ಲಿ ಒಂದು ಆರ್ಡರ್ ಹೊರಡಿಸಿದ್ದರು. ಆ ಆರ್ಡರ್ ಜಾರಿಗೆ ತರುತ್ತೀರೋ ಆ ಬಡಾವಣೆ ಜನರಿಗೆ, ಮಕ್ಕಳಿಗೆ ತೊಂದರೆಯಾಗಿದೆ. ಆ ಆರ್ಡರ್ ನಂಬರ್ ಹೆಚ್.ಯು.ಡಿ. 268 ಎಮ್‌ವೈಎ 94, ಬೆಂಗಳೂರು ಡೇಟೆಡ್ 16ನೇ ನವಂಬರ್. ಈ ಆರ್ಡರ್ ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪ್ರಶ್ನೆ, ಉಪ ಪ್ರಶ್ನೆ ಸಾಕಷ್ಟು ಕೇಳಬಹುದು, ಅದಕ್ಕೆ ಅವಕಾಶ ಕೊಡಬಾರದು ಎಂದೂ ಏನೂ ಇಲ್ಲ. ತಮ್ಮ ಅನುಮತಿ ಪಡೆದು ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅನೇಕ ಲೀಸ್‌ಗಳನ್ನು ಏನು ಕೊಟ್ಟಿದ್ದಾರೆ, ಲೀಸ್ ಪೀರಿಯಡ್ ಮುಗಿದು ಹೋಗಿದೆ, ಅದು ಯಾವ ಪರ್ಪಸ್‌ಗೆ ಕೊಟ್ಟಿದ್ದಾರೆ, ಆ ಪರ್ಪಸ್‌ಗೆ ಬಳಕೆ ಮಾಡಿಕೊಂಡಿಲ್ಲ ಎನ್ನುವುದು ಒಂದು. ಕೆಲವು ಲೀಸ್ ಡೀಡ್ ಮಾಡತಕ್ಕಂತಹ ಕಾಲದಲ್ಲಿ ಕಾಲ ಕೂಡ ಮಿತಿ ಮಾಡಿಲ್ಲ.

30 ವರ್ಷ, 35 ವರ್ಷ ಅಥವಾ 10 ವರ್ಷ ಎಂದು ಕಾಲ ಮಿತಿ ಕೂಡ ನಿಗಧಿ ಪಡಿಸಿಲ್ಲ. ಕಾಲ ಮಿತಿ ಇಲ್ಲದೆ 10 ವರ್ಷ ಕೊಡುವುದೇ, ಈ ತರಹ ತೊಂದರೆಗಳು ಇವೆ. ಅದಕ್ಕೆ ನಾನು ಆಗಲೇ ಆಡಳಿತ ಅಧಿಕಾರಿಗಳಿಗೆ ಮತ್ತು ಕಾರ್ಪೊರೇಷನ್ ಕಮಿಷನರುಗಳಿಗೆ ಸೂಚನೆ ಕೊಟ್ಟಿದ್ದೇನೆ. ಇದರ ಒಂದೊಂದು ಪ್ರಕರಣಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇನೆ. ಇದರ ಜೊತೆ ಸರ್ಕಾರ ಈಗಾಗಲೇ ತನ್ನ ನಿರ್ಣಯ ತೆಗೆದುಕೊಳ್ಳುವ ಹಂತದಲ್ಲಿ ಇದೆ. ಒಂದು ಡಿಐಜಿಯ ನೇತೃತ್ವದಲ್ಲಿ ಒಂದು ಪೋಲೀಸ್ ಹಿರಿಯ ತನಿಖಾ ದಳವನ್ನು ನೇಮಕ ಮಾಡಿ, ಕಾರ್ಪೊರೇಷನ್ ಮತ್ತು ನಗರ ಪಾಲಿಕೆ ಆಸ್ತಿ ಯಾರು ಇವತ್ತು ಆಕ್ರಮಣ ಮಾಡಿಕೊಂಡಿದ್ದಾರೆ, ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ಸಣ್ಣ ಸಣ್ಣ ಬಡವರಿಗೆ ಅಲ್ಲ ಬಡವರಿಗೆ ನಾವು ಖಾಯಂ ಮಾಡುವುದಕ್ಕಾಗುವುದಿಲ್ಲ.

ಕಿರುಗಾವಲಿಗೆ ಪೋಲಿಸ್ ಠಾಣೆ ಮಂಜೂರು

26 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಈ ಆರ್ಥಿಕ ವರ್ಷದಲ್ಲಿ ಎಷ್ಟು ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ?

ಆ) ಒಂದು ಪೋಲೀಸ್ ಠಾಣೆ ಸ್ಥಾಪಿಸಲು ಇರಬೇಕಾದ ಮೂಲಭೂತ ಅಗತ್ಯತೆಗಳೇನು?

ಇ) ಕಿರುಗಾವಲು ಗ್ರಾಮಕ್ಕೆ ಅವಶ್ಯಕತೆ ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಈ ಆರ್ಥಿಕ ವರ್ಷದಲ್ಲಿ 20 ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ರಾಷ್ಟ್ರೀಯ ಪೋಲೀಸ್ ಆಯೋಗವು ತನ್ನ ಶಿಫಾರಸ್ಸಿನಲ್ಲಿ ಈ ಕೆಳಕಂಡ ಸಂದರ್ಭಗಳಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಬಹುದೆಂದು ತಿಳಿಸಿದೆ.

(1) ಒಂದು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿನ ಜನಸಂಖ್ಯೆ 60,000 ಇರಬೇಕು.

(2) ಒಂದು ಪೋಲೀಸ್ ಠಾಣಾ ವ್ಯಾಪ್ತಿಯು 150 ಚದರ ಕಿ.ಮೀ.ಗಳಿಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿದ್ದಲ್ಲಿ, ಅಲ್ಲಿ ಇನ್ನೊಂದು ಠಾಣೆ ಪ್ರಾರಂಭಿಸುವುದು.

(3) ಒಂದು ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾರ್ಷಿಕ 700 ಅಪರಾಧ ಪ್ರಕರಣಗಳು ವರದಿಯಾದಲ್ಲಿ, ಆ ಠಾಣೆಯನ್ನು ವಿಭಜಿಸಿ ಹೊಸ ಠಾಣೆ ಪ್ರಾರಂಭಿಸುವುದು.

ಇದಲ್ಲದೇ, ಆ ಪ್ರದೇಶದಲ್ಲಿನ ಕಾನೂನು ಸುವ್ಯವಸ್ಥೆ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ